**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು, ಜೆ.ಎಂ.ಎಫ್.ಸಿ./ಎಂ.ಎ.ಸಿ.ಟಿ. ಇವರ ನ್ಯಾಯಾಲಯ, ಮುಧೋಳ**
**ಇಂದು ದಿನಾಂಕ 16.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮಧ್ಯಂತರ ಅರ್ಜಿ ಸಂಖ್ಯೆ 4 ರ ಮೇಲಿನ ಆದೇಶದ ಮೇರೆಗೆ ಪುನಃ ಕರೆಸಿ ಮುಖ್ಯ ವಿಚಾರಣೆಗೆ ಅನುಮತಿ ನೀಡಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರವಾಗಿ ಶ್ರೀ. ಎಂ ಕೆ ಎನ್. ವಕೀಲರಿಂದ**

ನಿಪಿ 15ಃ ಅಂಗನ್ಯೂನತೆಯ ಪ್ರಮಾಣ ಪತ್ರ

ನಿಪಿ 16ಃ X Ray Film

ನಿಪಿ 17ಃ ಬಾಗಲಕೋಟ ಜಿಲ್ಲಾ ಆಸ್ಪತ್ರೆಯ ಡಿಸಚಾರ್ಜ ಕಾರ್ಡ್

**ಪಾಟೀ ಸವಾಲುಃ ಎದುರುದಾರರ 2 ರವರ ಪರ ವಕೀಲರಾದ ಶ್ರೀ ಎ ಸಿ ಎನ್ ರವರ ಪರವಾಗಿಃ**

ಅರ್ಜಿದಾರ ಮೂಕ ಮತ್ತು ಕಿವುಡ ಇದ್ದ ಬಗ್ಗೆ ಅದಕ್ಕೆ ಸಂಬಂದಪಟ್ಟಂತೆ ಅವನ ಪರವಾಗಿ ಪರಿಣಿತಿ ಹೊಂದಿರುವ ವ್ಯಕ್ತಿಗಳನ್ನು ಆತನ ಸಂಜ್ಞೆಕಡೆಯಿಂದ ಸಾಕ್ಷಿ ನುಡಿಯಲು ನಾನು ಯಾವುದೇ ವ್ಯಕ್ತಿಗಳಿಂದ ಸಾಕ್ಷಿ ಮಾಡಿಸಿಲ್ಲ ಎಂದರೆ ಸರಿ. ಈ ದಿನ ಅರ್ಜಿದಾರನನ್ನು ನಾನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿ. ನನಗೆ ಅರ್ಜಿದಾರ ಮಹಾಲಿಂಗನ ಪರವಾಗಿ ಯಾವುದೇ ಸಾಕ್ಷಿ ನುಡಿಯಲು ಬರುವುದಿಲ್ಲ ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 15 ರ ಅಂಗನ್ಯೂನತೆಯ ಪ್ರಮಾಣ ಪತ್ರವನ್ನು ಮುಧೋಳದ ಉದಯ ನಾಯಕ ಆಸ್ಪತ್ರೆಯಿಂದ ಪಡೆದುಕೊಂಡು ಬಂದಿರುವೆನು. ಈ ಪ್ರಕರಣದಲ್ಲಿ ಹೆಚ್ಚಿನ ಪರಿಹಾರ ಹಣ ಪಡೆಯಲು ನಿಪಿ 15 ನ್ನು ವೈದ್ಯರಿಂದ ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವ ಹಾಗೆ ನಿಪಿ 15 ರಿಂದ 17 ರ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರ ಮತ್ತು ಅವರ ವಕೀಲರನ್ನು ಕೂಗಿಸಲಾಯಿತು ನ್ಯಾಯಾಲಯದಲ್ಲಿ ಹಾಜರು ಇರದ ಕಾರಣ ಅವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

VIJAYAKUMAR KANNUR
Digitally signed by VIJAYAKUMAR KANNUR
Date: 2025.06.17 10:29:02 +0530

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು/
ಜೆ.ಎಂ.ಎಫ್.ಸಿ.,/ಎಂ ಎ ಸಿ ಟಿ., ಮುಧೋಳ